# ಕರ್ನಾಟಕ ಜೀವನ ನಿರ್ವಹಣಾ ಭತ್ಯ ಸಂದಾಯ ಅಧಿನಿಯಮ, 1988.

ಪ್ರಕರಣಗಳ ಕ್ರಮಪಟ್ಟಿ

ಪ್ರಕರಣಗಳು:

1. ಚಿಕ್ಕ ಹೆಸರು ಮತ್ತು ಪ್ರಾರಂಭ.
2. ಪರಿಭಾಷೆಗಳು.
3. ಜೀವನ ನಿರ್ವಹಣಾ ಭತ್ಯದ ಸಂದಾಯ.
4. ನಿಯೋಜಕನಿಂದ ಬಾಕಿ ಇರುವ ಹಣದ ವಸೂಲಿ.
5. ಕೆಲವು ಹಕ್ಕುಗಳು ಮತ್ತು ವಿಶೇಷಾಧಿಕಾರಗಳ ಉಳಿಸುವಿಕೆ.
6. ವಿನಾಯಿತಿ ನೀಡಲು ಅಧಿಕಾರ.
7. ಸರ್ಕಾರದ ಅದಿಕಾರಗಳ ಪ್ರತ್ಯಾಯೋಜನೆ.
8. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.
9. ದಂಡಗಳು.
10. ಕೆಲವು ಸಂದರ್ಭಗಳಲ್ಲಿ ಅಧಿಭೋಗದಾರ ಅಥವಾ ವ್ಯವಸ್ಥಾಪಕನಿಗೆ ದಾಯಿತ್ವಗಳಿಂದ ವಿನಾಯಿತಿ.
11. ಅಪರಾಧಗಳ ಸಂಜ್ಞಾನ.
12. ನಿಯಮಗಳ ರಚನಾಧಿಕಾರ.

* * * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**1992ರ ಅಧಿನಿಯಮ ಸಂಖ್ಯೆ 18:-** ನಿಯೋಜಕರು, ಆರೋಪಿತ ದುರ್ವರ್ತನೆಯ ವಿಚಾರಣೆಯು ಇತ್ಯರ್ಥದಲ್ಲಿದೆ ಅಥವಾ ನೌಕರನ ವಿರುದ್ಧ ಕ್ರಿಮಿನಲ್ ಅಪರಾಧದ ದೂರಿನ ತನಿಖೆ ಅಥವಾ ವಿಚಾರಣೆ ನಡೆಯುತ್ತದೆ ಎಂಬ ಕಾರಣಕ್ಕಾಗಿ, ಪದೇ-ಪದೇ, ನೌಕರರನ್ನು ಅಮಾನತ್ತಿನಲ್ಲಿಡಲು ಯತ್ನಿಸುತ್ತಾರೆ.

ಕೆಲವು ಸಂದರ್ಭಗಳಲ್ಲಿ ನಿಯೋಜಕರು ಅಂಥ ಅಮಾನತ್ತಿನ ಅವಧಿಯಲ್ಲಿ ಯಾವುದೇ ಜೀವನ ನಿರ್ವಹಣಾ ಭತ್ಯವನ್ನು ಸಂದಾಯ ಮಾಡುವುದಿಲ್ಲ.

ಕೈಗಾರಿಕಾ ಉದ್ಯೋಗ (ಸ್ಥಾಯೀ ಆದೇಶಗಳು) ಅಧಿನಿಯಮ, 1946ರ ಅಡಿಯಲ್ಲಿನ ಮಾದರಿ ಸ್ಥಾಯೀ ಆದೇಶಗಳು, ಅಮಾನತ್ತಿನ ಅವಧಿಯಲ್ಲಿ ಅಂಥ ಜೀವನ ನಿರ್ವಹಣಾ ಭತ್ಯದ ಸಂದಾಯಕ್ಕಾಗಿ ಉಪಬಂಧ ಕಲ್ಪಿಸುತ್ತವೆ.

ಕೈಗಾರಿಕಾ ಉದ್ಯೋಗ (ಸ್ಥಾಯೀ ಆದೇಶಗಳು) ಅಧಿನಿಯಮವು ಅನ್ವಯವಾಗುವ ಹಲವಾರು ಸ್ಥಾಪನೆಗಳು, ತಮ್ಮ ಸ್ಥಾಯೀ ಆದೇಶಗಳು, ಮಾದರಿ ಸ್ಥಾಯೀ ಆದೇಶಗಳು ರಚಿತವಾಗುವುದಕ್ಕೆ ಮುಂಚೆ ಪ್ರಮಾಣಿತವಾಗಿರುವುದರಿಂದ, ತಮ್ಮ ಸ್ಥಾಯೀ ಆದೇಶಗಳಲ್ಲಿ ಜೀವನ ನಿರ್ವಹಣಾ ಭತ್ಯದ ಸಂದಾಯಕ್ಕಾಗಿ ಅಗತ್ಯವಿರುವ ಉಪಬಂಧಗಳನ್ನು ಕಲ್ಪಿಸಿಲ್ಲ. ಸ್ಥಾಯೀ ಆದೇಶಗಳ ಅಧಿನಿಯಮವು ಅನ್ವಯವಾಗದಿರುವ ಸ್ಥಾಪನೆಗಳಲ್ಲಿ ಅಮಾನತ್ತಿನಲ್ಲಿಡಲಾದ ನೌಕರನಿಗೆ ಜೀವನ ನಿರ್ವಹಣಾ ಭತ್ಯದ ಸಂದಾಯಕ್ಕಾಗಿ ಯಾವುದೇ ಶಾಸನ ಅಥವಾ ನಿಯಮ ಸಹ ಇಲ್ಲ. ಆದ್ದರಿಂದ, ಅಮಾನತ್ತಿನಲ್ಲಿಡಲಾದ ನೌಕರನಿಗೆ ಜೀವನ ನಿರ್ವಹಣಾ ಭತ್ಯದ ಸಂದಾಯಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಶಾಸನವನ್ನು ರಚಿಸುವುದು ಅಗತ್ಯವಾಗಿದೆ.

(ದಿನಾಂಕ 5-2-1988ರ ಕರ್ನಾಟಕ ರಾಜ್ಯ ಪತ್ರದ ಭಾಗ-4 ಸೆಕ್ಷನ್-2ಎ (ವಿಶೇಷ ಪತ್ರಿಕೆ) ಸಂಖ್ಯೆ 73, ಎಂಬುದಾಗಿ ಪ್ರಕಟವಾಗಿದೆ).

● * * *

1992ರ ಕರ್ನಾಟಕ ಅಧಿನಿಯಮ ಸಂಖ್ಯೆ 18

*(1992ರ ಜುಲೈ 15ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

**ಕರ್ನಾಟಕ ಜೀವನ ನಿರ್ವಹಣಾ ಭತ್ಯೆ ಸಂದಾಯ ಅಧಿನಿಯಮ, 1988**

*(1988ರ ಡಿಸೆಂಬರ್ ತಿಂಗಳ 24ನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರ ಅನುಮತಿ ಪಡೆಯಲಾಗಿದೆ.)*

**ಅಮಾನತ್ತಿನಲ್ಲಿಡಲಾದ ಅವಧಿಯಲ್ಲಿ ನೌಕರರಿಗೆ ಜೀವನ ನಿರ್ವಹಣಾ ಭತ್ಯೆಯನ್ನು ಸಂದಾಯ ಮಾಡುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.**

ಇದರಲ್ಲಿ ಇನ್ನು ಮುಂದೆ ಕಾಣಿಸಲಾದ ಉದ್ದೇಶಗಳಿಗಾಗಿ ಅಮಾನತ್ತಿನಲ್ಲಿಡಲಾದ ಅವಧಿಯಲ್ಲಿ ನೌಕರರಿಗೆ ಜೀವನ ನಿರ್ವಹಣಾ ಭತ್ಯೆಯನ್ನು ಸಂದಾಯ ಮಾಡುವುದಕ್ಕಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಮೂವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಚಿಕ್ಕ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಜೀವನ ನಿರ್ವಹಣಾ ಭತ್ಯೆ ಸಂದಾಯ ಅಧಿನಿಯಮ, 1988 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಯಲ್ಲಿ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ನೌಕರ" ಎಂದರೆ ಬಾಡಿಗೆಗಾಗಿ ಅಥವಾ ಪ್ರತಿಫಲಕ್ಕಾಗಿ ಯಾವುದೇ ಕುಶಲ, ಅರೆಕುಶಲ, ಅಥವಾ ಕುಶಲವಲ್ಲದ, ಕೈದುಡಿಮೆ, ಮೇಲ್ವಿಚಾರಣಾ, ತಾಂತ್ರಿಕ, ವಿದ್ಯುತ್ ಅಥವಾ ಯಾವುದೇ ಇತರ ರೀತಿಯ ಕಾರ್ಯ ಅಥವಾ ಕಾರ್ಯಚಟುವಟಿಕೆಗಳನ್ನು ಮಾಡಲು ಯಾವುದೇ ಸಂಸ್ಥೆಯಲ್ಲಿ ಅಥವಾ ಅದರ ಕಾರ್ಯ ಅಥವಾ ಕಾರ್ಯಚಟುವಟಿಕೆಯ ಸಂಬಂಧದಲ್ಲಿ ನಿಯೋಜಿತನಾದ-ನಿಯೋಜನಾ ನಿಬಂಧನೆಗಳು ವ್ಯಕ್ತವಾಗಿರಲಿ ಅಥವಾ ಸೂಚ್ಯವಾಗಿರಲಿ-ಯಾವೊಬ್ಬ ವ್ಯಕ್ತಿ, ಆದರೆ,-

(i) ಮುಖ್ಯವಾಗಿ ವ್ಯವಸ್ಥಾಪನಾ ಅಥವಾ ಆಡಳಿತಾತ್ಮಕ ಅಧಿಕಾರದ ಮೇಲೆ ನಿಯೋಜಿತನಾದ; ಅಥವಾ

(ii) ಮೇಲ್ವಿಚಾರಣಾ ಅಧಿಕಾರದ ಮೇಲೆ ನಿಯೋಜಿತನಾಗಿದ್ದು ತಿಂಗಳಿಗೆ ಐದುನೂರು ರೂಪಾಯಿಗಳನ್ನು ಮೀರಿ ವೇತನ ಪಡೆಯುವ ಅಥವಾ ಕಛೇರಿಗೆ ಸಂಬಂಧಪಟ್ಟ ಕರ್ತವ್ಯಗಳ ಸ್ವರೂಪದಿಂದಾಗಲೀ ಅಥವಾ ತನ್ನಲ್ಲಿ ನಿಹಿತವಾದ ಅಧಿಕಾರಗಳ ಕಾರಣದಿಂದಾಗಲೀ ಮುಖ್ಯವಾಗಿ ವ್ಯವಸ್ಥಾಪನಾ ಸ್ವರೂಪದ ಪ್ರಕಾರ್ಯಗಳನ್ನು ಚಲಾಯಿಸುವ,

-ಅಂಥ ಯಾವೊಬ್ಬ ವ್ಯಕ್ತಿಯನ್ನೂ ಒಳಗೊಳ್ಳುವುದಿಲ್ಲ;

(ಬಿ) "ನಿಯೋಜಕ" ಎಂದರೆ ಸಂಸ್ಥೆಯ ಮಾಲೀಕ ಮತ್ತು ಇದು, ಅಂಥ ಸಂಸ್ಥೆಯಲ್ಲಿರುವ ನೌಕರರ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ವಹಿಸಿಕೊಡಲಾದ ಯಾವೊಬ್ಬ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ಸಿ) "ಸಂಸ್ಥೆ" ಎಂದರೆ ಯಾವುದೇ ಕೈಗಾರಿಕೆ, ವ್ಯಾಪಾರ, ವ್ಯವಹಾರ, ಉದ್ಯಮ, ತಯಾರಿಕೆ, ವೃತ್ತಿ ಅಥವಾ ಸೇವೆಯನ್ನು ನಡೆಸಲಾಗುತ್ತಿರುವ ಮತ್ತು ಯಾವುದರ ಸಂಬಂಧದಲ್ಲಿ ರಾಜ್ಯದ ಕಾರ್ಯನಿರ್ವಾಹಕ ಅಧಿಕಾರವು ವಿಸ್ತರಿಸಲಾಗಿದೆಯೋ ಆ ಯಾವುದೇ ಸ್ಥಳ; ಆದರೆ,-

(i) ಕೇಂದ್ರ ಅಥವಾ ರಾಜ್ಯ ಸರ್ಕಾರದ ಯಾವುದೇ ಕಛೇರಿ ಅಥವಾ ಇಲಾಖೆ; ಅಥವಾ

(ii) ರೈಲ್ವೆ ಆಡಳಿತ; ಅಥವಾ

(iii) ಯಾವುದೇ ಗಣಿ ಅಥವಾ ತೈಲ ಕ್ಷೇತ್ರ; ಅಥವಾ

(iv) ಯಾವುದೇ ಬೃಹತ್ ಬಂದರು; ಅಥವಾ

(v) ಕೇಂದ್ರ ಸರ್ಕಾರದ ಯಾವುದೇ ಸರ್ಕಾರಿ ವಲಯ ಉದ್ಯಮವನ್ನು

– ಒಳಗೊಳ್ಳುವುದಿಲ್ಲ.

***ವಿವರಣೆ:-*** ಈ ಖಂಡದ ಉದ್ದೇಶಕ್ಕಾಗಿ "ಯಾವುದೇ ಕೇಂದ್ರ ಸರ್ಕಾರದ ಸರ್ಕಾರಿ ವಲಯ ಉದ್ಯಮ" ಎಂದರೆ:–

(i) ಕೇಂದ್ರ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಒಂದು ಇಲಾಖೆಯಿಂದ;

(ii) ಕಂಪನಿಗಳ ಅಧಿನಿಯಮ, 1956 (1956ರ ಕೇಂದ್ರಾಧಿನಿಯಮ 1) ರ 617ನೇ ಪ್ರಕರಣದಲ್ಲಿ ಪರಿಭಾಷಿಸಲಾದ ಮತ್ತು ಕೇಂದ್ರ ಸರ್ಕಾರದ ಮಾಲೀಕತ್ವ ಹೊಂದಿರುವ ಮತ್ತು ನಿಯಂತ್ರಣದಲ್ಲಿರುವ ಒಂದು ಸರ್ಕಾರಿ ಕಂಪನಿಯಿಂದ;

(iii) ಕೇಂದ್ರ ಸರ್ಕಾರದ ನಿಯಂತ್ರಣ ಹೊಂದಿರುವ ಅಥವಾ ಆಡಳಿತ ವ್ಯವಸ್ಥೆಗೊಳಪಟ್ಟಿರುವ ಕೇಂದ್ರ ಅಧಿನಿಯಮದಿಂದ ಅಥವಾ ಅದರ ಅಡಿಯಲ್ಲಿ ಸ್ಥಾಪಿತವಾದ ಒಂದು ನಿಗಮದಿಂದ;

–ಮಾಲೀಕತ್ವ ಪಡೆದ ನಿಯಂತ್ರಿತವಾದ ಅಥವಾ ಆಡಳಿತಕ್ಕೊಳಪಟ್ಟ ಒಂದು ಸಂಸ್ಥೆ;

(ಡಿ) "ಸರ್ಕಾರ" ಎಂದರೆ ರಾಜ್ಯ ಸರ್ಕಾರ;

(ಇ) "ಕೈಗಾರಿಕೆ" ಎಂದರೆ ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ ಕೇಂದ್ರಾಧಿನಿಯಮ ೧೪)ರ 2 (ಜೆ) ಪ್ರಕರಣದಲ್ಲಿ ಪರಿಭಾಷಿಸಲಾದ ಒಂದು ಕೈಗಾರಿಕೆ;

(ಎಫ್) "ಅಮಾನತ್ತು" ಎಂದರೆ ನಿಯೋಜಕನ ತಾತ್ಕಾಲಿಕ ತೀರ್ಮಾನದ ಪರಿಣಾಮದಿಂದಾಗಿ ನೌಕರನನ್ನು,-

(i) ಅವನ ವಿರುದ್ಧದ ಗಂಭೀರ ಆರೋಪಗಳ ಬಗ್ಗೆ ವಿಚಾರಣೆ ನಡೆಸಲು ಉದ್ದೇಶಿಸಲಾಗಿದೆ ಅಥವಾ ವಿಚಾರಣೆಯು ಇತ್ಯರ್ಥದಲ್ಲಿದೆ ಅಥವಾ ವಿಚಾರಣೆಯು ಪೂರ್ಣಗೊಂಡ ತರುವಾಯ ಯಾವುದೇ ಅಂತಿಮ ಆದೇಶವನ್ನು ಹೊರಡಿಸಿಲ್ಲ; ಅಥವಾ

(ii) ಯಾವುದೇ ಕ್ರಿಮಿನಲ್ ಅಪರಾಧದ ಬಗ್ಗೆ ಅವನ ವಿರುದ್ಧದ ದೂರು ತನಿಖೆಗೊಳ್ಳುತ್ತಿದೆ ಅಥವಾ ಅಧಿವಿಚಾರಣೆಯಲ್ಲಿದೆ ಅಥವಾ ದೂರನ್ನು ಅಂತಿಮವಾಗಿ ಇತ್ಯರ್ಥಗೊಳಿಸಿಲ್ಲ,

–ಎಂಬ ಆಧಾರದ ಮೇಲೆ, ತನ್ನ ಕಛೇರಿಗೆ ಹಾಜರಾಗುವುದರಿಂದ ಅಥವಾ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುವುದರಿಂದ ತಾತ್ಕಾಲಿಕವಾಗಿ ಹೊರಹಾಕಲಾಗಿದೆ ಎಂದು ಅರ್ಥ.

(ಜಿ) "ಮಜೂರಿ" ಎಂಬುದು ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ ಕೇಂದ್ರ ಅಧಿನಿಯಮ ೧೪)ರ 2ನೇ ಪ್ರಕರಣದ (ಆರ್ ಆರ್) ಖಂಡದಲ್ಲಿನ ಅರ್ಥವನ್ನೇ ಹೊಂದಿರತಕ್ಕದ್ದು.

**3. ಜೀವನ ನಿರ್ವಹಣಾ ಭತ್ಯದ ಸಂದಾಯ.-** (1) ಅಮಾನತ್ತಿನಲ್ಲಿಡಲಾದ ಒಬ್ಬ ನೌಕರನು, ಅಂಥ ಅಮಾನತ್ತಿನ ಅವಧಿಯಲ್ಲಿ, ತನ್ನನ್ನು ಅಮಾನತ್ತಿನಲ್ಲಿಡುವುದಕ್ಕೆ ನಿಕಟಪೂರ್ವದಲ್ಲಿ ತಾನು ಪಡೆಯುತ್ತಿದ್ದ ಮಜೂರಿಯ ಶೇಕಡಾ ಐವತ್ತಕ್ಕೆ ಸಮನಾದ ಮೊಬಲಗಿನ ಸಂದಾಯವನ್ನು ಅಂಥ ಅಮಾನತ್ತಿನ ದಿನಾಂಕದಿಂದ ಲೆಕ್ಕಹಾಕಿ ಮೊದಲ ತೊಂಬತ್ತು ದಿನಗಳಿಗೆ ಜೀವನ ನಿರ್ವಹಣಾ ಭತ್ಯೆಯಂತೆ ತನ್ನ ನಿಯೋಜಕನಿಂದ ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಅಮಾನತ್ತಿನ ಅವಧಿಯು ತೊಂಬತ್ತು ದಿನಗಳನ್ನು ಮೀರಿರುವಲ್ಲಿ, ಆದರೆ ನೂರ ಎಂಬತ್ತು ದಿನಗಳು ಮೀರಿರದಿದ್ದರೆ ನೌಕರನು ಸದರಿ ತೊಂಬತ್ತು ದಿನಗಳ ಅವಧಿಯ ತರುವಾಯ, ತನ್ನನ್ನು ಅಮಾನತ್ತಿನಲ್ಲಿಡುವುದಕ್ಕೆ ನಿಕಟಪೂರ್ವದಲ್ಲಿ ತಾನು ಪಡೆಯುತ್ತಿದ್ದ ಮಜೂರಿಯ ಶೇಕಡಾ ಎಪ್ಪತ್ತೈದರಷ್ಟಕ್ಕೆ ಸಮನಾದ ಜೀವನ ನಿರ್ವಹಣಾ ಭತ್ಯವನ್ನು ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕದ್ದು:

ಮತ್ತು ಪರಂತು, ಅಮಾನತ್ತಿನ ಅವಧಿಯು ನೂರ ಎಂಬತ್ತು ದಿನಗಳನ್ನು ಮೀರಿರುವಲ್ಲಿ, ನೌಕರನು, ಸದರಿ ಒಂದು ನೂರ ಎಂಬತ್ತು ದಿನಗಳ ಅವಧಿಯ ತರುವಾಯ, ತನ್ನನ್ನು ಅಮಾನತ್ತಿನಲ್ಲಿಡುವುದಕ್ಕೆ ನಿಕಟ ಪೂರ್ವದಲ್ಲಿ ತಾನು ಪಡೆಯುತ್ತಿದ್ದ ಮಜೂರಿಯ ಶೇಕಡಾ ತೊಂಬತ್ತಕ್ಕೆ ಸಮನಾದ ಜೀವನ ನಿರ್ವಹಣಾ ಭತ್ಯವನ್ನು ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕದ್ದು:

ಅಲ್ಲದೆ ಪರಂತು, ವಿಚಾರಣೆ ಅಥವಾ ಕ್ರಿಮಿನಲ್ ವ್ಯವಹರಣೆಯು, ನೌಕರನ ಮೇಲೆ ನೇರವಾಗಿ ಆರೋಪಿಸಬಹುದಾದ ಕಾರಣಗಳಿಗಾಗಿ ತೊಂಬತ್ತು ದಿನಗಳನ್ನು ಮೀರಿ ವಿಸ್ತರಿಸಿರುವಲ್ಲಿ, ಜೀವನ ನಿರ್ವಹಣಾ

ಭತ್ಯವನ್ನು ತೊಂಬತ್ತು ದಿನಗಳಿಗೆ ಮೀರಿದ ಅವಧಿಗಾಗಿ, ನೌಕರನನ್ನು ಅಮಾನತ್ತಿನಲ್ಲಿಡುವುದಕ್ಕೆ ನಿಕಟ ಪೂರ್ವದಲ್ಲಿ ಅವನು ಪಡೆಯುತ್ತಿದ್ದ ಮಜೂರಿಯ ಶೇಕಡ ಐವತ್ತರಷ್ಟಕ್ಕೆ ಕಡಿಮೆಗೊಳಿಸತಕ್ಕದ್ದು.

(2) ನೌಕರನು, ತನ್ನನ್ನು ಅಮಾನತ್ತಿನಲ್ಲಿಡುವುದಕ್ಕೆ ನಿಕಟಪೂರ್ವದಲ್ಲಿ ತನ್ನನ್ನು ಅಮಾನತ್ತಿನಲ್ಲಿಡಲಾದ ಅವಧಿಯಲ್ಲಿ ತಾನು ಕೆಲಸ ಮಾಡುತ್ತಿದ್ದ ಸಂಸ್ಥೆಯ ಹೊರತು, ಯಾವುದೇ ಇತರ ಸ್ಥಾಪನೆಯಲ್ಲಿ ಉದ್ಯೋಗವನ್ನು ಅಂಗೀಕರಿಸಿದರೆ, ಅವನು ಯಾವುದೇ ಜೀವನ ನಿರ್ವಹಣಾ ಭತ್ಯವನ್ನು ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ;

(3) ನೌಕರನು, ಯಾವುದೇ ಪ್ರಸಂಗದಲ್ಲಿ, (1)ನೇ ಉಪ-ಪ್ರಕರಣದ ಅಡಿಯಲ್ಲಿ ತನಗೆ ಅಂಗೀಕಾರಾರ್ಹವಾದ ಜೀವನ ನಿರ್ವಹಣಾ ಭತ್ಯದ ಯಾವುದೇ ಭಾಗದ ಮರುಪಾವತಿಗಾಗಲಿ ಅಥವಾ ಮುಟ್ಟುಗೋಲಿಗಾಗಲಿ ಬದ್ಧನಾಗಿರತಕ್ಕದ್ದಲ್ಲ:

ಪರಂತು, ನೌಕರನಿಗೆ, ಯಾವ ಆರೋಪದ ಆಧಾರದ ಮೇಲೆ ತನ್ನನ್ನು ಅಮಾನತ್ತಿನಲ್ಲಿಡಲು ಆದೇಶಿಸಲಾಯಿತೋ ಆ ಆರೋಪದಿಂದ ಮಾಫಿ ನೀಡಲಾಗಿದ್ದರೆ, ಯಾವುದೇ ಅವಧಿಗೆ ತನಗೆ ಸಂದಾಯವಾದ ಜೀವನ ನಿರ್ವಹಣಾ ಭತ್ಯವನ್ನು ಅಮಾನತ್ತಿನ ಅವಧಿಯಲ್ಲಿ ತನಗೆ ಅನುಮತಿಸಬಹುದಾದ ಪೂರ್ಣ ಮಜೂರಿಗೆ ಹೊಂದಾಣಿಕೆ ಮಾಡತಕ್ಕದ್ದು.

(4) (1)ನೇ ಉಪ-ಪ್ರಕರಣದ ಅಡಿಯಲ್ಲಿ ಜೀವನ ನಿರ್ವಹಣಾ ಭತ್ಯವನ್ನು, ನಿಯೋಜಕನು ನೌಕರನಿಗೆ, ಅವನನ್ನು ಅಮಾನತ್ತಿನಲ್ಲಿಡದಿದ್ದರೆ ಮಜೂರಿಯು ಸಂದಾಯವಾಗಬಹುದಾಗಿದ್ದ ದಿನಾಂಕ ಅಥವಾ ದಿನಾಂಕಗಳಂದು ಸಂದಾಯ ಮಾಡತಕ್ಕದ್ದು.

**4. ನಿಯೋಜಕನಿಂದ ಬಾಕಿ ಇರುವ ಹಣದ ವಸೂಲಿ.-** ಈ ಅಧಿನಿಯಮದ ಅಡಿಯಲ್ಲಿ ನಿಯೋಜಕನಿಂದ ನೌಕರನಿಗೆ ಯಾವುದೇ ಹಣವು ಬಾಕಿಯಿರುವಲ್ಲಿ, ನೌಕರನು ತಾನೇ ಅಥವಾ ಈ ಪರವಾಗಿ ತನ್ನಿಂದ ಪ್ರಾಧಿಕೃತಗೊಂಡ ಯಾವೊಬ್ಬ ಇತರ ವ್ಯಕ್ತಿ ಅಥವಾ ನೌಕರನು ಮೃತನಾದ ಸಂದರ್ಭದಲ್ಲಿ ಅವನ ಕಾನೂನುಬದ್ಧ ಪ್ರತಿನಿಧಿಯು, ವಸೂಲಿಯ ಯಾವುದೇ ರೀತಿಗೆ ಪ್ರತಿಕೂಲವಾಗದಂತೆ, ತನಗೆ ಬಾಕಿಯಿರುವ ಹಣದ ವಸೂಲಿಗಾಗಿ ನಿಯಮಿಸಬಹುದಾದ ಅಂಥ ರೀತಿಯಲ್ಲಿ ಸರ್ಕಾರಕ್ಕೆ ಒಂದು ಅರ್ಜಿಯನ್ನು ಸಲ್ಲಿಸಬಹುದು ಮತ್ತು ಸರ್ಕಾರವು, ನಿಯಮಿಸಬಹುದಾದ ಅಂಥ ರೀತಿಯಲ್ಲಿ ನೌಕರನಿಗೆ ಅಹವಾಲು ಹೇಳಿಕೊಳ್ಳಲು ಒಂದು ಅವಕಾಶ ನೀಡಿದ ತರುವಾಯ ಯಾವುದೇ ಹಣವು ಹಾಗೆ ಬಾಕಿಯಿದೆಯೆಂದು ಮನದಟ್ಟು ಮಾಡಿಕೊಂಡರೆ, ಅವರು, ಅಂಥ ಮೊಬಲಗಿಗಾಗಿ ಡೆಪ್ಯುಟಿ ಕಮಿಷನರಿಗೆ ಒಂದು ಪ್ರಮಾಣ ಪತ್ರವನ್ನು ನೀಡತಕ್ಕದ್ದು ಮತ್ತು ಡೆಪ್ಯುಟಿ ಕಮಿಷನರು ಅದನ್ನು ಭೂ ಕಂದಾಯದ ಬಾಕಿಯನ್ನು ವಸೂಲು ಮಾಡುವ ರೀತಿಯಲ್ಲಿಯೇ ವಸೂಲು ಮಾಡಲು ಮುಂದುವರಿಯತಕ್ಕದ್ದು:

ಪರಂತು, ಅಂಥ ಪ್ರತಿಯೊಂದು ಅರ್ಜಿಯನ್ನೂ ನಿಯೋಜಕನಿಂದ ನೌಕರನಿಗೆ ಹಣವು ಬಾಕಿ ಉಳಿದ ದಿನಾಂಕದಿಂದ ಒಂದು ವರ್ಷದೊಳಗಾಗಿ ಸಲ್ಲಿಸತಕ್ಕದ್ದು:

ಮತ್ತು ಪರಂತು, ಅಂಥ ಯಾವುದೇ ಅರ್ಜಿಯನ್ನು, ಸದರಿ ಅವಧಿಯೊಳಗೆ ಅರ್ಜಿಯನ್ನು ಸಲ್ಲಿಸದಿರಲು ಅರ್ಜಿದಾರನಿಗೆ ಸಾಕಷ್ಟು ಕಾರಣವಿತ್ತೆಂದು ಸರ್ಕಾರಕ್ಕೆ ಮನದಟ್ಟಾದರೆ, ಒಂದು ವರ್ಷದ ಸದರಿ ಅವಧಿಯು ಮುಕ್ತಾಯವಾದ ತರುವಾಯವೂ ಸ್ವೀಕರಿಸಬಹುದು.

**5. ಕೆಲವು ಹಕ್ಕುಗಳು ಮತ್ತು ವಿಶೇಷಾಧಿಕಾರಗಳ ಉಳಿಸುವಿಕೆ.-** ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಅಥವಾ ಯಾವುದೇ ಕರಾರು, ರೂಢಿ ಅಥವಾ ಆಚರಣೆಯ ಅಡಿಯಲ್ಲಿ ಯಾವೊಬ್ಬ ನೌಕರನಿಗಿರುವ ಯಾವುದೇ ಹಕ್ಕು ಅಥವಾ ವಿಶೇಷಾಧಿಕಾರವು, ಅವನಿಗೆ ಈ ಅಧಿನಿಯಮದ ಅಡಿಯಲ್ಲಿ ಪ್ರದತ್ತವಾದ ಯಾವುದೇ ಹಕ್ಕು ಅಥವಾ ವಿಶೇಷಾಧಿಕಾರಕ್ಕಿಂತ ಹೆಚ್ಚು ಅನುಕೂಲಕರವಾಗಿದ್ದರೆ, ಈ ಅಧಿನಿಯಮದಲ್ಲಿರುವುದಾವುದೂ ಅವನನ್ನು ಬಾಧಿಸತಕ್ಕದ್ದಲ್ಲ.

**6. ವಿನಾಯಿತಿ ನೀಡಲು ಅಧಿಕಾರ.-** ಸರ್ಕಾರವು, ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೆ ಮಾಡುವುದು ಉಚಿತವೆಂದು ತಾನು ಭಾವಿಸಿದರೆ, ಅಧಿಸೂಚನೆಯ ಮೂಲಕ, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಷರತ್ತುಗಳು, ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟು ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಅವಧಿ ಅಥವಾ ಅವಧಿಗಳಿಗೆ ಮತ್ತು ಅಂಥ ಕಾರಣಗಳಿಗಾಗಿ ಸ್ಥಾಪನೆಗಳ ಯಾವುದೇ ವರ್ಗ ಅಥವಾ ವರ್ಗಗಳಿಗೆ, ಈ ಅಧಿನಿಯಮದ ಎಲ್ಲ ಅಥವಾ ಯಾವುವೇ ಉಪಬಂಧಗಳ ಕಾರ್ಯಾಚರಣೆಯಿಂದ ವಿನಾಯಿತಿ ನೀಡಬಹುದು.

**7. ಸರ್ಕಾರದ ಅಧಿಕಾರಗಳ ಪ್ರತ್ಯಾಯೋಜನೆ.–** (1) ಸರ್ಕಾರವು ಅಧಿಸೂಚನೆಯ ಮೂಲಕ, ತನಗೆ ಅಧೀನವಾಗಿರುವ ಯಾವುದೇ ಪ್ರಾಧಿಕಾರ ಅಥವಾ ಅಧಿಕಾರಿಗೆ ಈ ಅಧಿನಿಯಮದಿಂದ ತನ್ನಲ್ಲಿ ನಿಹಿತವಾಗಿರುವ ಎಲ್ಲ ಅಥವಾ ಯಾವುವೇ ಅಧಿಕಾರಗಳನ್ನು ಚಲಾಯಿಸಲು ಪ್ರಾಧಿಕಾರ ನೀಡಬಹುದು ಮತ್ತು ಅದೇ ರೀತಿಯಲ್ಲಿ ಅಂಥ ಪ್ರಾಧಿಕಾರವನ್ನು ಹಿಂತೆಗೆದುಕೊಳ್ಳಬಹುದು.

(2) (1)ನೇ ಉಪ-ಪ್ರಕರಣದಲ್ಲಿ ಪ್ರತ್ಯಾಯೋಜಿಸಲಾದ ಯಾವುವೇ ಅಧಿಕಾರಗಳ ಚಲಾವಣೆಯು, ಅಧಿಸೂಚನೆಯಲ್ಲಿ ನಿಯಮಿಸಬಹುದಾದ ಅಥವಾ ನಿರ್ಧಿಷ್ಟಪಡಿಸಬಹುದಾದ ಅಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಮತ್ತು ಸರ್ಕಾರದ ಅಥವಾ ಈ ಸಂಭಂಧದಲ್ಲಿ ಸರ್ಕಾರದಿಂದ ಅಧಿಕಾರ ಪಡೆದ ಅಂಥ ಅಧಿಕಾರಿಯ ನಿಯಂತ್ರಣ ಮತ್ತು ಪರಿಷ್ಕರಣೆಗೆ ಒಳಪಟ್ಟಿರತಕ್ಕದ್ದು. ಸರ್ಕಾರವು, ಹಾಗೆ ಅಧಿಕಾರ ಪಡೆದ ಯಾವೊಬ್ಬ ಅಧಿಕಾರಿಯ ಕೃತ್ಯ ಅಥವಾ ವ್ಯವಹರಣೆಗಳನ್ನು ನಿಯಂತ್ರಿಸಲು ಮತ್ತು ಪರಿಷ್ಕರಿಸಲೂ ಸಹ ಅಧಿಕಾರ ಹೊಂದಿರತಕ್ಕದ್ದು.

**8. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** (1) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುವೇ ನಿಯಮಗಳ ಅನುಸರಣೆಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಲಾದ ಯಾವುದೇ ಕೃತ್ಯಕ್ಕಾಗಿ ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಗಳು ಇರತಕ್ಕದ್ದಲ್ಲ.

(2) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುವೇ ನಿಯಮಗಳ ಅನುಸರಣೆಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಲಾದ ಯಾವುದೇ ಕೃತ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ಹಾನಿಗಾಗಿ ಸರ್ಕಾರದ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಗಳು ಇರತಕ್ಕದ್ದಲ್ಲ.

**9. ದಂಡಗಳು.–** ಈ ಅಧಿನಿಯಮದ ಯಾವುದೇ ಉಪಬಂಧವನ್ನು ಅಥವಾ ಅದರಡಿಯಲ್ಲಿ ರಚಿಸಲಾದ ಯಾವುದೇ ನಿಯಮವನ್ನು ಉಲ್ಲಂಘಿಸುವ, ಯಾವೊಬ್ಬ ವ್ಯಕ್ತಿಯು, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂ.ಗಳಿಗೆ ಕಡಿಮೆಯಲ್ಲದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**10. ಕೆಲವು ಸಂದರ್ಭಗಳಲ್ಲಿ ಅಧಿಭೋಗದಾರ ಅಥವಾ ವ್ಯವಸ್ಥಾಪಕನಿಗೆ ದಾಯಿತ್ವಗಳಿಂದ ವಿನಾಯಿತಿ.–** ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಅಪರಾಧಕ್ಕಾಗಿ ಒಂದು ಸ್ಥಾಪನೆಯ ಅಧಿಭೋಗದಾರ ಅಥವಾ ವ್ಯವಸ್ಥಾಪಕನ ಮೇಲೆ ಆರೋಪ ಹೊರಿಸಿದ್ದಲ್ಲಿ ಅವನು ತನ್ನಿಂದ ಯಥೋಚಿತವಾಗಿ ನೀಡಿದ ದೂರಿನ ಮೇಲೆ ಮತ್ತು ಫಿರ್ಯಾದಿಗೆ ಹಾಗೆ ಮಾಡುವಲ್ಲಿನ ತನ್ನ ಉದ್ದೇಶವನ್ನು ಮೂರು ಪೂರ್ಣ ದಿನಗಳಿಗೆ ಕಡಿಮೆಯಿಲ್ಲದ ಅವಧಿಗೆ ಲಿಖಿತ ನೋಟೀಸನ್ನು ನೀಡಿದ ಮೇಲೆ ಅವನು ವಾಸ್ತವವಾಗಿ ಅಪರಾಧಿಯೆಂದು ಆರೋಪ ಮಾಡುವ ಯಾವೊಬ್ಬ ಇತರ ವ್ಯಕ್ತಿಯನ್ನು ಆರೋಪದ ವಿಚಾರಣೆಗಾಗಿ ಗೊತ್ತುಪಡಿಸಲಾದ ಸಮಯಕ್ಕೆ ನ್ಯಾಯಾಲಯದ ಮುಂದೆ ಕರೆತರುವ ಹಾಗೆ ಮಾಡಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅಪರಾಧ ನಡೆದದ್ದು ರುಜುವಾತಾದ ತರುವಾಯ ಸಂದರ್ಭಾನುಸಾರ ಸ್ಥಾಪನೆಯ ಅಧಿಭೋಗದಾರ ಅಥವಾ ವ್ಯವಸ್ಥಾಪಕನು,–

(ಎ) ಈ ಅಧಿನಿಯಮವನ್ನು ಜಾರಿಗೊಳಿಸುವಲ್ಲಿ ಅವನು ಯುಕ್ತ ಶ್ರದ್ಧೆವಹಿಸಿದ್ದಾನೆಂದು; ಮತ್ತು

(ಬಿ) ಆತನ ತಿಳಿವಳಿಕೆ, ಒಪ್ಪಿಗೆ ಅಥವಾ ಪರೋಕ್ಷ ಸಮ್ಮತಿ ಇಲ್ಲದೇ ಸದರಿ ಇನ್ನೊಬ್ಬ ವ್ಯಕ್ತಿಯು ಸಂಬಂಧಿಸಿದ ಅಪರಾಧವನ್ನೆಸಗಿದ್ದಾನೆಂದು,

–ನ್ಯಾಯಾಲಯಕ್ಕೆ ಮನದಟ್ಟು ಮಾಡಿದರೆ, ಇನ್ನೊಬ್ಬ ವ್ಯಕ್ತಿಯು ಸ್ಥಾಪನೆಯ ಅಧಿಭೋಗದಾರ ಅಥವಾ ವ್ಯವಸ್ಥಾಪಕನೆಂಬಂತೆ ಅಪರಾಧದ ದೋಷಿಯಾಗತಕ್ಕದ್ದು ಮತ್ತು ಅವನು ಅಂಥದೇ ಶಿಕ್ಷೆಗೆ ಬದ್ಧನಾಗತಕ್ಕದ್ದು ಮತ್ತು ಸಂದರ್ಭಾನುಸಾರ ಅಧಿಭೋಗದಾರ ಅಥವಾ ವ್ಯವಸ್ಥಾಪಕನು ಅಂಥ ಅಪರಾಧದ ಸಂಬಂಧದಲ್ಲಿ ಈ ಅಧಿನಿಯಮದ ಅಡಿಯಲ್ಲಿ ಯಾವುದೇ ದಾಯಿತ್ವದಿಂದ ಮುಕ್ತನಾಗತಕ್ಕದ್ದು:

ಪರಂತು, ಮೇಲೆ ಹೇಳಿದಂತೆ ರುಜುವಾತು ಮಾಡುವಲ್ಲಿ, ಸಂದರ್ಭಾನುಸಾರ ಸ್ಥಾಪನೆಯ ಅಧಿಭೋಗದಾರ ಅಥವಾ ವ್ಯವಸ್ಥಾಪಕನನ್ನು ಪ್ರಮಾಣ ವಚನದ ಮೇಲೆ ಪರೀಕ್ಷಿಸಬಹುದು ಮತ್ತು ಅವನ ಸಾಕ್ಷ್ಯ ಮತ್ತು ಇದಕ್ಕೆ ಬೆಂಬಲವಾಗಿ ಅವನು ತರುವ ಯಾವುದೇ ಸಾಕ್ಷಿಗಳು ವಾಸ್ತವ ಅಪರಾಧಿಯೆಂದು ಆರೋಪಿಸಲಾದ ವ್ಯಕ್ತಿಯ ಪರವಾಗಿ ಮತ್ತು ಅಭಿಯೋಜಕನಿಂದ ಪಾಟಿ ಸವಾಲಿಗೆ ಒಳಪಡತಕ್ಕದ್ದು:

ಮತ್ತು ಪರಂತು, ವಾಸ್ತವ ಅಪರಾಧಿಯೆಂದು ಆರೋಪಿತನಾದ ವ್ಯಕ್ತಿಯನ್ನು ಆರೋಪದ ವಿಚಾರಣೆಗಾಗಿ ಗೊತ್ತುಪಡಿಸಲಾದ ಸಮಯಕ್ಕೆ ಅಧಿಭೋಗದಾರ ಅಥವಾ ವ್ಯವಸ್ಥಾಪಕ ನ್ಯಾಯಾಲಯಕ್ಕೆ ಕರೆತರಲಾಗದಿದ್ದರೆ ನ್ಯಾಯಾಲಯವು ವಿಚಾರಣೆಯನ್ನು ಆಗಿಂದಾಗ್ಗೆ ಮೂರು ತಿಂಗಳಿಗೆ ಮೀರದ ಅವಧಿಗೆ ಮುಂದೂಡತಕ್ಕದ್ದು ಮತ್ತು ವಾಸ್ತವ ಅಪರಾಧಿಯೆಂದು ಆರೋಪಿತನಾದ ವ್ಯಕ್ತಿಯನ್ನು ಸದರಿ ಅವಧಿಯ ಮುಕ್ತಾಯಕ್ಕೆ ಮುಂಚೆ ನ್ಯಾಯಾಲಯದ ಮುಂದೆ ಕರೆತರಲಾಗದಿದ್ದರೆ ನ್ಯಾಯಾಲಯವು ಅಧಿಭೋಗದಾರ ಅಥವಾ ವ್ಯವಸ್ಥಾಪಕನ ವಿರುದ್ಧದ ಆರೋಪದ ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ಅಪರಾಧವು ರುಜುವಾತಾದರೆ ಸಂದರ್ಭಾನುಸಾರ ಅಧಿಭೋಗದಾರ ಅಥವಾ ವ್ಯವಸ್ಥಾಪಕನನ್ನು ದೋಷಿಯನ್ನಾಗಿಸತಕ್ಕದ್ದು.

**11. ಅಪರಾಧಗಳ ಸಂಜ್ಞಾನ.-** (1) ಯಾವುದೇ ನ್ಯಾಯಾಲಯವು, ಸರ್ಕಾರದಿಂದ ಈ ಪರವಾಗಿ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಪ್ರಾಧಿಕೃತಗೊಳಿಸಲಾದ ಅಧಿಕಾರಿಯಿಂದ ಮಾಡಲಾದ ಲಿಖಿತ ದೂರಿನ ಹೊರತು, ಈ ಅಧಿನಿಯಮದಡಿಯಲ್ಲಿ ಶಿಕ್ಷಾರ್ಹವಾದ ಯಾವುದೇ ಅಪರಾಧದ ಸಂಜ್ಞಾನವನ್ನು ತೆಗೆದುಕೊಳ್ಳತಕ್ಕದ್ದಲ್ಲ.

(2) ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ದರ್ಜೆಗಿಂತ ಕಡಿಮೆಯಲ್ಲದ ಯಾವ ನ್ಯಾಯಾಲಯವೂ ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧದ ವಿಚಾರಣೆ ನಡೆಸತಕ್ಕದ್ದಲ್ಲ.

**12. ನಿಯಮಗಳ ರಚನಾಧಿಕಾರ.-** ಸರ್ಕಾರವು ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಪೂರ್ವೋಕ್ತ ಅಧಿಕಾರದ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ,-

(ಎ) ಈ ಅಧಿನಿಯಮದಿಂದ ವ್ಯಕ್ತವಾಗಿ ಅಗತ್ಯಪಡಿಸಲಾದ ಅಥವಾ ಅನುಮತಿಸಲಾದ, ನಿಯಮಿಸಬೇಕಾದ ಎಲ್ಲ ವಿಷಯಗಳನ್ನು;

(ಬಿ) ಜೀವನ ನಿರ್ವಹಣಾ ಭತ್ಯವು ಸಂದೇಯವಿರುವ ರೀತಿಯನ್ನು ಮತ್ತು ಯಾವ ಷರತ್ತುಗಳಿಗೊಳಪಟ್ಟು ಅದು ಸಂದೇಯವಿರುವುದೋ ಅವುಗಳನ್ನು; ಮತ್ತು

(ಸಿ) ಈ ಅಧಿನಿಯಮದ ಅಡಿಯಲ್ಲಿನ ಅಧಿಕಾರಗಳನ್ನು ಯಾವ ನಿರ್ಬಂಧಗಳು ಮತ್ತು ಷರತ್ತುಗಳಿಗೊಳಪಟ್ಟು ಪ್ರತ್ಯಾಯೋಜಿಸಬಹುದೋ ಅವುಗಳನ್ನು,

-ವಿನಿಯಮಿಸಲು ನಿಯಮಗಳನ್ನು ರಚಿಸಬಹುದು.

(3) ಈ ಪ್ರಕರಣದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚಿನ ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ರಾಜ್ಯ ವಿಧಾನಮಂಡಲವು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಹಾಗೆ ಮಂಡಿಸಲಾದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಉಭಯ ಸದನಗಳು ಒಪ್ಪಿದರೆ ಅಥವಾ ನಿಯಮವು ಪರಿಣಾಮಕಾರಿಯಾಗತಕ್ಕದ್ದಲ್ಲವೆಂದು ಉಭಯ ಸದನಗಳು ಒಪ್ಪಿದರೆ ನಿಯಮವು, ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಮಾರ್ಪಾಟು ಅಥವಾ ರದ್ದಿಯಾತಿಯನ್ನು ಅಧಿಸೂಚಿಸಿದ ದಿನಾಂಕದಿಂದ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ, ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಲಾದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗಿರತಕ್ಕದ್ದಲ್ಲ.

* * * *